ಅನುಬಂಧ–2

ವಿಧಾನಸಭೆ–ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:5578ರ ಲಗತ್ತು

ಕಲಘಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಜಿಲ್ಲಾಪಂಚಾಯತ್ ರಸ್ತೆಗಳ ಡಾಂಬರೀಕರಣಕ್ಕೆ ಕಳೆದ 3 ವರ್ಷಗಳಿಂದ ಮಂಜೂರು ಮಾಡಿರುವ ಹಾಗೂ ಬಿಡುಗಡೆ ಮಾಡಿರುವ ಹಣದ ವಿವರ

ರೂ.ಲಕ್ಷಗಳಲ್ಲಿ

ವರ್ಷ	ಮಂಜೂರಾದ ಹಣ	ಬಿಡುಗಡೆಯಾದ ಹಣ
2002–03	6.71	6.71
2003–04	46.78	28.80
2004–05	63.78	47.99

4787(5580) **ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ)** : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಪಶ್ಚಿಮ ಘಟ್ಟ ಅರಣ್ಯ ಪ್ರದೇಶದ ವ್ಯಾಪ್ತಿ ಎಷ್ಟು;(ತಾಲೂಕುವಾರು ಮಾಹಿತಿ ನೀಡುವುದು)

ಆ) ಕಲಘಟಗಿ ಕ್ಷೇತ್ರದಲ್ಲಿ ಪಶ್ಚಿಮ ಘಟ್ಟ ಪ್ರದೇಶ ಎಷ್ಟಿದೆ;

ಇ) ಕಲಘಟಗಿ ತಾಲ್ಲೂಕನ್ನು ಪಶ್ಚಿಮ ಘಟ್ಟ ಪ್ರದೇಶ ಎಂದು ಸರ್ಕಾರ ಘೋಷಿಸಲಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ತಾಲ್ಲೂಕು	ಪ್ರದೇಶ
ಧಾರವಾಡ	14,855.647 ಹೆ.
ಕಲಘಟಗಿ	18,939.650 ಹೆ.
ಹುಬ್ಬಳ್ಳಿ	–
ನವಲಗುಂದ	–
ಕುಂದಗೋಳ	–
ಒಟ್ಟು	33,795.297 ಹೆ.

ಆ) ಕಲಘಟಗಿ ಕ್ಷೇತ್ರದಲ್ಲಿ ಪಶ್ಚಿಮ ಘಟ್ಟ ಪ್ರದೇಶ 18,939.650 ಹೆ.

ಇ) ಈ ಬಗ್ಗೆ ಯಾವುದೇ ಪ್ರಸ್ತಾವನೆಯಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

4788(5581) **ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ):-** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿರುವ ಸರ್ಕಾರಿ ವಸತಿಗೃಹಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಎಷ್ಟು ವಸತಿಗೃಹಗಳನ್ನು ಸರ್ಕಾರಿ ಸಿಬ್ಬಂದಿಗಳಿಗೆ ಹಂಚಿಕೆ ಮಾಡಲಾಗಿದೆ;

ಇ) ಸರ್ಕಾರಿ ಸಿಬ್ಬಂದಿಗಳು ನಿವೃತ್ತಿಯಾದ ನಂತರವೂ ವಸತಿಗೃಹಗಳನ್ನು ತೆರವುಗೊಳಿಸದಿರುವುದು ನಿಜವೇ; ಎಷ್ಟು ಸಿಬ್ಬಂದಿ ಖಾಲಿ ಮಾಡಿರುವುದಿಲ್ಲ; ಇವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ವಸತಿಗೃಹಗಳಿಗೆ ಬಾಡಿಗೆ ಸಂದಾಯ ಮಾಡದಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಬಾಕಿ ಸಂದಾಯವಾಗಬೇಕಿರುವ ಹಣ ಎಷ್ಟು;

ಉ) ಹಾಗಿದ್ದಲ್ಲಿ, ಈ ಬಾಕಿ ಹಣ ವಸೂಲಿಗೆ ಸರ್ಕಾರ ಕೈಗೊಂಡುರುವ ಕ್ರಮಗಳೇನು;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು):

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿರುವ ಸರ್ಕಾರಿ ವಸತಿಗೃಹಗಳ ಒಟ್ಟು ಸಂಖ್ಯೆ: 90

ಆ) ಒಟ್ಟು 90 ವಸತಿಗೃಹಗಳನ್ನು ಸರ್ಕಾರಿ ಸಿಬ್ಬಂದಿಗಳಿಗೆ ಹಂಚಿಕೆ ಮಾಡಲಾಗಿದೆ;

ಇ) ಹೌದು. 16 ಸರ್ಕಾರಿ ಸಿಬ್ಬಂದಿಗಳು ವಸತಿಗೃಹಗಳನ್ನು ಖಾಲಿ ಮಾಡಿರುವುದಿಲ್ಲ. ಇವುಗಳ ಪೈಕಿ 13 ಜನರು ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಉಳಿದ 3 ನೌಕರರಿಗೆ ದಂಡ ರೂಪದ ಬಾಡಿಗೆ ಭರಿಸಲು ನೋಟೀಸ್ ಜಾರಿ ಮಾಡಲಾಗಿದೆ.

ಈ) ವಸತಿಗೃಹಗಳಿಗೆ ಬಾಡಿಗೆ ಸಂದಾಯ ಮಾಡದಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆ 58. ಇಂಥಹ ನೌಕರರ ವೇತನದಿಂದ 10 ವರ್ಷಗಳಿಗೆ ಸರಾಸರಿ ಅಂದಾಜು ಮಾಹೆಯಾನ ರೂ.800-00 ಗಳಂತೆ ಲೆಕ್ಕಹಾಕಿ ರೂ.55.00 ಲಕ್ಷಗಳಷ್ಟು ಸಂದಾಯವಾಗಬೇಕಾಗಿರುತ್ತದೆ.